# ಸುದ್ದಿಸಂಚಯ

**ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಹೊಸ ವೆಬ್ ಸೈಟ್ ಅನ್ನು ದಯವಿಟ್ಟು ಸಂದರ್ಶಿಸಿರಿ. ಇದರ ವಿಳಾಸ**

**srkmys.org**

❄ ಸೆಪ್ಟೆಂಬರ್ ೨೯ರಿಂದ ಅಕ್ಟೋಬರ್ ೨ರವರೆಗೆ ಬೇಲೂರು ಮಠದಲ್ಲಿ ನಡೆದ ದುರ್ಗಾಪೂಜೆಯ ಸಂದರ್ಭದಲ್ಲಿ ೨೯,೦೦೦ ಭಕ್ತರು ಪೂಜೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರಸಾದವನ್ನು ಸ್ವೀಕರಿಸಿದರು. ಕಾರ್ಯಕ್ರಮಗಳನ್ನು ದೂರದರ್ಶನವು ನೇರಪ್ರಸಾರ ಮಾಡಿತ್ತು.

❄ ರಾಮಕೃಷ್ಣ ಮಠದ ಉತ್ತರ ಭಾರತದ ೨೫ ಕೇಂದ್ರಗಳಲ್ಲಿ ದುರ್ಗಾಪೂಜೆಯನ್ನು ಬಹಳ ಶ್ರದ್ಧೆಯಿಂದ ಆಚರಿಸಲಾಯಿತು. ಪಟ್ನಾ ಕೇಂದ್ರದಲ್ಲಿ ನಡೆದ ದುರ್ಗಾಪೂಜೆಯ ಸಂದರ್ಭದಲ್ಲಿ ಅಕ್ಟೋಬರ್ ಒಂದನೇ ತಾರೀಖಿನಂದು ಬಿಹಾರ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಯುತ ನಿತೀಶ್‌ಕುಮಾರ್ ಪೂಜೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಬಾಂಗ್ಲಾ ದೇಶದ ೮ ಕೇಂದ್ರಗಳಲ್ಲೂ ದುರ್ಗಾ ಪೂಜೆಯನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು. ಅಲ್ಲಿನ ಹಿರಿಯ ಪದಾಧಿಕಾರಿಗಳೂ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಮಾರಿಷಸ್‌ನಲ್ಲಿರುವ ಕೇಂದ್ರದಲ್ಲೂ ದುರ್ಗಾಪೂಜೆಯನ್ನು ಆಚರಿಸಲಾಯಿತು.

❄ ದೇವಘರ್ ವಿದ್ಯಾಪೀಠದ ಒಂಬತ್ತನೇ ತರಗತಿಯ ವಿದ್ಯಾರ್ಥಿ ಟಿ.ಪ್ರಭಾಕರ್ ರಾಷ್ಟ್ರೀಯ ಮಟ್ಟದ ವಿಜ್ಞಾನ ಸಂಕಿರಣದಲ್ಲಿ ಭಾಗವಹಿಸಿ ಪರಿಸರ ಸಂರಕ್ಷಣೆಯ ಕುರಿತಾಗಿ ತಾನು ಮಂಡಿಸಿದ ವಿದ್ವತ್ಪೂರ್ಣ ವಿಚಾರಗಳಿಗೆ ಪ್ರಥಮ ಬಹುಮಾನ ಗಳಿಸಿದ್ದಾನೆ.

❄ ಚೆನ್ನೈನಲ್ಲಿರುವ ವಿದ್ಯಾಪೀಠವು ಅಕ್ಟೋಬರ್ ೬ ಮತ್ತು ೭ರಂದು ವಿಶೇಷ ಪ್ರದರ್ಶನವನ್ನು ಏರ್ಪಡಿಸಿತ್ತು. ರಾಮಕೃಷ್ಣ ಮಠ ಮತ್ತು ಮಿಷನ್ ಕೇಂದ್ರಗಳ ವಿವಿಧ ಚಟುವಟಿಕೆಗಳನ್ನು ಪರಿಚಯಿಸಿದ ಈ ಪ್ರದರ್ಶನವನ್ನು ೧,೫೦೦ ಶಾಲಾ ಮಕ್ಕಳು ವೀಕ್ಷಿಸಿದರು.

❄ ತ್ರಿಪುರಾದ ಅಗರ್ತಲದಲ್ಲಿರುವ ವಿವೇಕನಗರ ಆಶ್ರಮವು ಅಕ್ಟೋಬರ್ ೮ರಂದು ರಕ್ತದಾನ ಶಿಬಿರವನ್ನು ಏರ್ಪಡಿಸಿತ್ತು. ತ್ರಿಪುರಾದ ಮುಖ್ಯಮಂತ್ರಿ ಶ್ರೀ ಮಾಣಿಕ್ ಸರ್ಕಾರ್ ಇದನ್ನು ಉದ್ಘಾಟಿಸಿದರು.

❄ ಮೈಸೂರಿನ ರಾಮಕೃಷ್ಣ ಆಶ್ರಮವು ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಗಳನ್ನು ಆಧರಿಸಿದ ಒಂದು ರಸಪ್ರಶ್ನೆ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಶಾರದಾ ಜ್ಞಾನಸುಧಾ ಎಂಬ ಈ ಸ್ಪರ್ಧೆಯಲ್ಲಿ ರಾಜ್ಯದ ೨೪ ಜಿಲ್ಲೆಗಳ ೭೧೫ ಶಾಲೆಗಳ, ೯೧,೦೦೦ ವಿದ್ಯಾರ್ಥಿಗಳು ಭಾಗವಹಿಸಿದರು. **ಯುಗಪುರುಷ ಶ್ರೀರಾಮಕೃಷ್ಣ** ಎಂಬ ಕಿರುಪುಸ್ತಕವನ್ನು ವಿದ್ಯಾರ್ಥಿಗಳು ಓದಿ, ಪ್ರಶ್ನೆಗಳನ್ನು ಉತ್ತರಿಸಬೇಕಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿದ ಅಧ್ಯಾಪಕರನ್ನು ಗುರುತಿಸಿ ಬಹುಮಾನಗಳನ್ನು ನೀಡಲಾಯಿತು. ಶಾಲಾ ಮಟ್ಟಗಳಲ್ಲಿಯೂ ಕೂಡ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ನೀಡಲಾಯಿತು.

❄ ಗರ್ಬೇಟಾ, ಸಿಲ್ಚರ್, ಬೆಳಗಾವಿ, ಲಿಂಬ್ಡಿ, ಲಕ್ನೌ, ನಾರಾಯಣಪುರ್, ಪಾಟ್ನಾ, ರಾಜ್‌ಕೋಟ್, ಹಲಸೂರು—ಈ ಸ್ಥಳಗಳಲ್ಲಿರುವ ರಾಮಕೃಷ್ಣ ಮಠ ಮತ್ತು ಮಿಷನ್ ಕೇಂದ್ರಗಳ ಮೂಲಕ ಅಕ್ಟೋಬರ್ ತಿಂಗಳಲ್ಲಿ ೪,೬೨೪ ಕಣ್ಣಿನ ರೋಗಿಗಳ ಉಚಿತ ತಪಾಸಣೆಯನ್ನು ಮಾಡಲಾಯಿತು. ಇವರಲ್ಲಿ ೭೨೮ ರೋಗಿಗಳಿಗೆ ಉಚಿತ ಶಸ್ತ್ರಚಿಕಿತ್ಸೆಯನ್ನೂ ಮಾಡಲಾಯಿತು.

❄ ನೆರೆ ಪರಿಹಾರ : ಆಂಧ್ರಪ್ರದೇಶ, ಗುಜರಾತ್, ಒರಿಸ್ಸಾ ಹಾಗೂ ಪಶ್ಚಿಮ ಬಂಗಾಳದಲ್ಲಿ ನೆರೆ ಹಾವಳಿಯಿಂದ ಪೀಡಿತರಾದ ಜನರಿಗಾಗಿ ಪ್ರಾರಂಭಿಸಲಾಗಿದ್ದ ಪರಿಹಾರ ಕಾರ್ಯಗಳು ಮುಂದುವರಿಯುತ್ತಿವೆ. ಆಂಧ್ರದ ರಾಜಮಹೇಂದ್ರಿ ಕೇಂದ್ರವು ಪೂರ್ವ ಗೋದಾವರಿ ಜಿಲ್ಲೆಯ ಇನವಿಲ್ಲಿ ಮತ್ತು ಮುಮ್ಮಿಡಿವರಂ ಮಂಡಲಗಳಲ್ಲಿ ೧,೨೪೬ ಕಂಬಳಿ, ಸೀರೆ, ಲುಂಗಿ, ಚಾಪೆ ಹಾಗೂ ಟ್ರಂಕುಗಳನ್ನು ೬೨೩ ಕುಟುಂಬಗಳಿಗೆ ನೀಡಿದೆ. ಗುಜರಾತಿನ ರಾಜ್‌ಕೋಟ್ ಕೇಂದ್ರವು ಅಹಮದಾಬಾದ್, ಅನಂದ್ ಮತ್ತು ಖೇಡಾ ಜಿಲ್ಲೆಗಳಲ್ಲಿ ೫,೦೦೦ ಕೆ.ಜಿ. ಅಕ್ಕಿ ಹಾಗೂ ಬೇಳೆ, ೧೨,೫೦೦ ಕೆ.ಜಿ. ಗೋಧಿಹಿಟ್ಟು, ೬೨೫ ಕೆ.ಜಿ. ಖಾದ್ಯತೈಲ, ೩೭೫ ಕೆ.ಜಿ. ಸಾಂಬಾರ ಪದಾರ್ಥಗಳು, ೧,೨೫೦ ಸೀರೆ ಹಾಗೂ ಪಂಚೆಗಳನ್ನು ವಿತರಿಸಿದೆ. ಒರಿಸ್ಸಾದ ಭುವನೇಶ್ವರ ಕೇಂದ್ರವು ಕೇಂದ್ರಪಾರಾ ಜಿಲ್ಲೆಯ ೧೩೦೧ ಕುಟುಂಬಗಳಿಗೆ ಟಾರ್ಪಾಲಿನ್‌ಗಳನ್ನು ನೀಡಿದೆ. ಪುರಿ ಮಠವು ೩೪ ಗ್ರಾಮಗಳ ೧೫,೦೧೩ ನಿರಾಶ್ರಿತರಿಗೆ ಆಹಾರ ಪದಾರ್ಥಗಳನ್ನು ನೀಡಿದೆ. ಪಶ್ಚಿಮ ಬಂಗಾಳದ ಆಂಟ್‌ಪುರ್ ಕೇಂದ್ರವು ೧೦,೫೦೬ ಜನರಿಗೆ ಆಹಾರವನ್ನು ನೀಡಿದೆ ಹಾಗೂ ೧೨,೫೫೦ ಕೆ.ಜಿ. ಅವಲಕ್ಕಿಯನ್ನು ವಿತರಿಸಿದೆ. ಬೆಲ್ಘೇರಿಯಾ ಕೇಂದ್ರವು ೪,೭೦೦ ನೆರೆಸಂತ್ರಸ್ತರಿಗೆ ಆಹಾರ ಪದಾರ್ಥಗಳನ್ನು ನೀಡಿದೆ. ಇಚ್ಛಾಪುರದ ಕೇಂದ್ರವು ೧೦೬ ಗ್ರಾಮಗಳ ೨೫,೮೭೫ ಕುಟುಂಬಗಳಿಗೆ ಆವಶ್ಯಕ ಪದಾರ್ಥಗಳನ್ನು ನೀಡಿದೆ. ಶಾರದಾಪೀಠ ಕೇಂದ್ರವು ೧೦ ಗ್ರಾಮಗಳ ೨೫೦೧ ಕುಟುಂಬಗಳಿಗೆ ಆಹಾರ ಪದಾರ್ಥಗಳನ್ನು ನೀಡಿದೆ. ಸರ್ಗಾಚಿ ಕೇಂದ್ರವು ಮುರ್ಷಿದಾಬಾದ್ ಜಿಲ್ಲೆಯ ೨೯ ಗ್ರಾಮಗಳ ೩೦,೫೨೪ ಕುಟುಂಬಗಳಿಗೆ ಆಹಾರ ಪದಾರ್ಥಗಳನ್ನು ನೀಡಿದೆ. ವೈದ್ಯಕೀಯ ಚಿಕಿತ್ಸೆಯ ವ್ಯವಸ್ಥೆಯನ್ನು ಕೂಡ ಈ ಕೇಂದ್ರವು ಆಯೋಜಿಸಿತ್ತು.



ರಸಪ್ರಶ್ನೆ ಕಾರ್ಯಕ್ರಮದಲ್ಲಿ ಬಹುಮಾನ ಪಡೆದ ವಿದ್ಯಾರ್ಥಿಗಳೊಡನೆ ಎಡದಿಂದ, ಶ್ರೀ ರಾಮಾನುಜ, ಸ್ವಾಮಿ ನಿತ್ಯಸ್ಥಾನಂದಜಿ